ANUBHAVS



# ಚಕ್ರಧರನ ಲೀಲೆಯಿಂದ ಚಕ್ರ ತಿರುಗುತ್ತಿದೆ

© Copyright 2010, Manasamarthyadata.com

manasamarthyadata.com

- ಡಾ. ರಾಜಶ್ರೀ ವೀರಾ ಶಾಹಾ, ವಡಾಲ

ಬುಧವಾರ ನವೆಂಬರ್ 10 ರಂದು ಧನಲಕ್ಷ್ಮಿ ಪೂಜೆಯ ಉತ್ಸವನದಲ್ಲಿ ನಾನು ತುಂಬಾ ಆನಂದಿಂದ ಸಹಭಾಗಿಯಾಗಿದ್ದೆನು. ಅದಕ್ಕೆ ಮುಂಚೆ ದೀಪಾವಳಿಯ ರಜೆಯಲ್ಲಿ ಮಾರ್ಕೆಟಿಂಗ್ ತಿರುಗಾಟ ಎಂದು ಹೆಚ್ಚಿನ ಪ್ರಮಾಣದಲ್ಲಿ ಹೊರಗಿನ ತಿನಿಸುಗಳ ತಿನ್ನುವಿಕೆಯಾಗಿದ್ದಿತು. ಆದಿನ ಸ್ವಲ್ಪ ಸ್ವಲ್ಪ ಹೊಟ್ಟೆ ನೋವಾಗುತ್ತಿತ್ತು. ಹೊರಗೆಡೆ ತಿಂದುದರಿಂದ ಹೀಗಾಗಿರಬೇಕೆಂದು ತಿಳಿದು ಅದನ್ನು ಅಲಕ್ಷಿಸಿದೆನು. ಮಾರನೆಯ ದಿನ ಮನೆಯಲ್ಲಿ ದೀಪಾವಳಿ ಲಕ್ಷ್ಮೀ ಪೂಜೆಯನ್ನು ಸಡಗರದಿಂದ ಆಚರಿಸಿದೆವು. ಹೋಳಿಗೆಯ ನೈವೇದ್ಯಯನ್ನು ನಂದಾ ಮಾತೆಗೆ ಅರ್ಪಿಸಿದೆನು. ಆಗ ಹೊಟ್ಟೆ ನೋವು ಸ್ವಲ್ಪ ಸಹಿಸಲಸಾಧ್ಯವಾದಂತೆನಿಸಿದುದರಿಂದ ಮಾತ್ರೆ ತೆಗೆದು ಕೊಂಡು ಮಲಗಿದೆನು. ರಾತ್ರಿಯೀಡಿ ಹೊಟ್ಟೆ ನೋವಿನಿಂದಾಗಿ ಎಚ್ಚರವಾಗಿಯೇ ಇದ್ದೆನು. ಆದರೆ, ಬೆಳಗ್ಗಿನ ಜಾವ 5 ಘಂಟೆಯ ಸುಮಾರಿಗೆ ಮಾತ್ರ ತೀರಾ ಸಹಿಸಲಸಾಧ್ಯವಾದಾಗ ಪಕ್ಕದಲ್ಲಿ ಮಲಗಿದ್ದ ನನ್ನ ಪತಿ ಡಾ. ಜಯೇಶ್‌ರವರನ್ನು ಎಬ್ಬಿಸಿ ಇಂಜೆಕ್ಷನ್ ಕೊಡಲು ಹೇಳಿದೆನು. ಆಗಲೂ ಕೂಡಾ ವೇದನೆ ಆಗುತ್ತಲೇ ಇದ್ದಿತು. ನಾನು ಸ್ವತಃ ಡಾಕ್ಟರ್ ಅದರಲ್ಲೂ ಸ್ತ್ರೀ ರೋಗ ತಜ್ಞೆಯಾಗಿದ್ದರೂ ಕೂಡಾ ಈ ನೋವಿನ ಕಾರಣವೇನೆಂಬುದು ತಿಳಿಯುತ್ತಿರಲಿಲ್ಲ. ಬೆಳಿಗ್ಗೆ 8 ಘಂಟೆಯಿಂದ ಡಾ. ಜಯೇಶ್ ಶಾಹರವರು ಸುಚಿತ್‌ದಾದಾರವರನ್ನು ಸಂಪರ್ಕಿಸಲು ಪ್ರಯತ್ನಿಸುತ್ತಿದ್ದರು. ಆದರೆ, ಫೋನೇ ತಾಗುತ್ತಿರಲಿಲ್ಲ. ನಾನು ವೇದನೆಯಿಂದ ಚಡಪಡಿಸುತ್ತಿದ್ದೆನು. ಸುಚಿತ್‌ದಾದಾರವರಿಗೆ ಹೇಗಾದರೂ ಮಾಡಿ ತಿಳಿಸಿರಿ ಎಂದು ಜಯೇಶ್‌ರವರನ್ನು ವಿನಂತಿಸಿಕೊಳ್ಳುತ್ತಿದ್ದೆನು. ಯಾಕೆಂದರೆ ನನಗೆ ಈಗಾಗಲೇ ಎರಡು ಸಲ ಸಿಝೇರಿಯನ್, ಮೂರನೇ ಸಲ ಎಪೆಂಡಿಕ್ಸ್ ಹಾಗೂ ನಾಲ್ಕನೆಯ ಸಲ ಎಪೆಂಡಿಕ್ಸ್ ಹೊಲಿಗೆ ಸೆಪ್ಟಿಕ್ ಆಯಿತು ಎಂದು ಹೀಗೆ ನಾಲ್ಕು ಸಲ ಆಪರೇಶನ್ ಆಗಿದೆ. ಈಗ ಮತ್ತೊಮ್ಮೆ ಅಪರೇಶನ್ ಬೇಡಪ್ಪಾ ಎಂದು ಬಾಪೂರವರಲ್ಲಿ ಮೊರೆಯಿಡುತ್ತಿದ್ದೆನು. ಹತ್ತಿರದಲ್ಲಿಯೇ ಇದ್ದಂತಹ ಆಸ್ಪತ್ರೆಯಲ್ಲಿ ಸೋನೋಗ್ರಾಫಿ ಮಾಡಿಸಿದೆವು. ಅದರಲ್ಲಿ ಏನೂ ಕಂಡು ಬರಲಿಲ್ಲ. ಅಷ್ಟರಲ್ಲಿ 9 ತಿಂಗಳ ಗರ್ಭಿಣಿಯ ಹೊಟ್ಟೆಯಂತೆ ನನ್ನ ಹೊಟ್ಟೆ ಊದಿಕೊಂಡಿತು. ಅದರ ಮೇಲೆ ಸದಾ ಬಟ್ಟೆಯ ಸ್ಪರ್ಶವನ್ನೂ ನನ್ನಿಂದ ಸಹಿಸಲಾಗಲಿಲ್ಲ.





ಅಷ್ಟರಲ್ಲಿ ನಾವು ನಮ್ಮ ಸಚ್ಚಿತ್‌ದಾದಾರನ್ನು ಸಂಪರ್ಕಿಸುವುದರಲ್ಲಿ ಯಶಸ್ವಿಯಾದೆವು. ಅವರು ಕೂಡಲೇ ಡಾ. ಮಥುರೆಯವರೊಡನೆ ಮಾತನಾಡುವಂತೆ ಹೇಳಿದರು. ಅಂತೆಯೇ ಮಾಡಿದ ಮೇಲೆ ಸುಮಾರು ಅರ್ಧ ಘಂಟೆಯಲ್ಲಿ ಡಾ. ಮಥುರೆಯವರು ಆಸ್ಪತ್ರೆಗೆ ಬಂದು ನನ್ನನ್ನು ಪರೀಕ್ಷಿಸಿ ಕೇಸು ತುಂಬಾ ಗಂಭೀರವಾಗಿದೆ, ಆಪರೇಶನ್ ಮಾಡುವುದು ಅನಿವಾರ್ಯವಾಗಿದ್ದಿತು. ಇವತ್ತೊಂದು ದಿನದ ಮಟ್ಟಿಗೆ ಕಾದು ನೋಡುವಾ ಎಂದರು. ನಾನು ಮನದಲ್ಲಿಯೇ ಬಾಪೂರವರಿಗೆ ಪ್ರಾರ್ಥಿಸಿಕೊಳ್ಳತೊಡಗಿದೆ. ಬಾಪೂ, ನಿಮಗೇನು ಉಚಿತವೇನಿಸುವುದೋ ಅದನ್ನು ಮಾಡಿಸಿ. ಅಷ್ಟರಲ್ಲಿ ಸುಚಿತ್‌ದಾದಾರವರ ಫೋನ್ ಬಂದಿತು. ರಾಜಶ್ರೀಗೆ ಹೇಳು ಬಾಪೂ ಹೇಳಿದ್ದಾರೆ ನಾನು ಹೇಳುವವರೆಗೂ ಬಾಯಿಯಿಂದ ಸದಾ ನೀರನ್ನು ಕೂಡಾ ಸೇವಿಸಬೇಡ, ಆಪರೇಶನ್ ಮಾಡುವ ಅವಶ್ಯಕತೆಯಿಲ್ಲ.

ಡಾ. ಮಥುರೆಯವರು ದಾದಾರವರ ಮಾರ್ಗದರ್ಶನದಂತೆಯೇ ಟ್ರೀಟ್‌ಮೆಂಟ್ ಶುರು ಮಾಡಿದರು. ಎರಡೇ ದಿನಗಳಲ್ಲಿ ಹೊಟ್ಟೆಯ ಊತ ಕಡಿಮೆಯಾಯಿತು ಹಾಗೂ ನೋವು ಕಡಿಮೆಯಾಯಿತು. ಮುಂದಿನ 5 ದಿನಗಳಲ್ಲಿ ನಾನು ಪೂರ್ಣ ಗುಣಮುಖಳಾದೆನು. ಹೊಟ್ಟೆಯ ಎಕ್ಸರೇ ಮತ್ತು ಇನ್ನಿತರ ಕೆಲವು ಟೆಸ್ಟ್‌ಗಳನ್ನು ಮಾಡಿಸಲಾಯಿತು. ಆದರೆ, ಕಾರಣವೇನೆಂಬುದು ತಿಳಿಯಲೇ ಇಲ್ಲ. ಹೇಗೆ ತಾನೇ ಸಾಧ್ಯ? ಯಾಕೆಂದರೆ ರೋಗವನ್ನೆಲ್ಲಾ ನನ್ನ ಬಾಪೂರವರು ನುಂಗಿ ಹಾಕಿದ್ದರು. ಇದುವರೆಗೂ ನಾನು ಕೇವಲ ಸಲಾಯಿನ್ ಮತ್ತು ಇಂಜೆಕ್ಷನ್‌ನ ಮೇಲೆಯೇ ಇದ್ದೆನು. ಮಂಗಳವಾರ 17 ನವೆಂಬರ್‌ರಂದು ನನಗೆ ತುಂಬಾ ಆರಾಮ ಎನಿಸಿತು. ಅಂದು ನಾನು ಪೂರ್ಣ 6 ದಿನಗಳ ನಂತರ ಸ್ವಲ್ಪ ಉದಿಯನ್ನು ನೀರಿನಲ್ಲಿ ಕಲಕಿ ಆ ನೀರು ಕುಡಿದೆನು. ಮಧ್ಯಾಹ್ನ ನಂತರ ತುಂಬಾ ರಿಲ್ಯಾಕ್ಸ್ ಅನಿಸುತ್ತಿದ್ದುದರಿಂದ ಡಾ. ಜಯೇಶ್ ಸಾಯಂಕಾಲ ಭಕ್ತಿಶೀಲದ ಕ್ಲಾಸಿಗೆ ಹೋದರು. ನನ್ನ ಹತ್ತಿರ ನನ್ನ ಅತ್ತೆ ಇದ್ದರು.

ಸಾಧಾರಣ 6.45ರ ಸುಮಾರಿಗೆ ನನಗೆ ಸ್ವಲ್ಪ ಉಬ್ಬಸದ ಹಾಗೆ ಅನಿಸತೊಡಗಿತು. ಏನೋ ಇಂಜೆಕ್ಷನ್‌ಗಳ ಪ್ರಭಾವದಿಂದಿರಬೇಕು ಎಂದುಕೊಂಡು ನರ್ಸ್‌ಗೆ ಉಬ್ಬಸಕ್ಕಿರುವ ಇಂಜೆಕ್ಷನ್ ಕೊಡುವಂತೆ ಹೇಳಿದೆನು. ಆದರೆ ಏನೂ ಪರಿಹಾರ ಕಾಣಲಿಲ್ಲ. ತೊಂದರೆ ಹೆಚ್ಚತೊಡಗಿತು. ಶ್ವಾಸ ಒಳಗಿಂದೊಳಗೇ ತಡೆದಂತಾಗುತ್ತಿತ್ತು. ಕಣ್ಣು ಕತ್ತಲೆಯಿಟ್ಟುಕೊಂಡತಾಯಿತು. ನಾನು ಸತತವಾಗಿ ಕೈಯಿಂದ ಎದೆಯನ್ನು ನೀವಿಕೊಳ್ಳುತ್ತಿದ್ದೆನು. ಮಾತನಾಡುವುದಕ್ಕೂ ಸಾಧ್ಯವಾಗುತ್ತಿರಲಿಲ್ಲ. ನನ್ನ ಅತ್ತೆಯಂತೂ ಹಾರ್ಟ್ ಅಟ್ಯಾಕೇ ಆಗಿರಬೇಕು ಎಂದುಕೊಂಡರು. ಅವರು ಕೂಡಲೇ ಡಾ.

ಜಯೆಶ್ ಶಾಹರವರನ್ನು ಕರೆಸಿಕೊಂಡರು. ಅವರು ಆಸ್ಪತ್ರೆಗೆ ತಲುಪುವಷ್ಟರಲ್ಲಿ ನನ್ನ ಪರಿಸ್ಥಿತಿ ವಿಕೋಪಕ್ಕಿಟ್ಟುಕೊಂಡಿದಿತು. ಕಣ್ಣ ಮುಂದಿನ ಕತ್ತಲೆಯಲ್ಲಿ ಕೇವಲ ಬಿಳಿಯ ಶರ್ಟು ಮಾತ್ರ ಕಾಣಿಸುತ್ತಿತ್ತು. ಆ ಶರ್ಟಿನ ತೋಳನ್ನು ಹಿಡಿದುಕೊಂಡು ನಾನು ಒಮ್ಮೆ ಬಾಪೂ ಎಂದೂ ಮತ್ತೊಮ್ಮೆ ''ಜಯೇಶ್ ಹೂ ಜಾಂವ್ರೂ ಚೂ'' ಎಂದು ಅಸ್ಪಷ್ಟವಾಗಿ ಬಡಬಡಿಸುತ್ತಿದ್ದೆನು. ಆ ನಂತರ ಏನಾಯಿತೆಂಬುದು ನನಗೆ ಗೊತ್ತಿಲ್ಲ. ನಾನು ಪ್ರಜ್ಞೆ ಕಳೆದುಕೊಂಡೆನು ಎಂದು ನಂತರ ನನಗೆ ಹೇಳಿದರು.

ತುಂಬಾ ಸಮಯದ ನಂತರ ಕಿವಿಗೆ ಶಬ್ದಗಳು ಕೇಳಿಸಿದವು ''ರಾಜೂ, ನಿನಗೆ ರಕ್ತ ಕೊಡಬೇಕಾಗಿದೆ'' ಕಣ್ಣುಗಳನ್ನು ಸ್ವಲ್ಪ ತೆರೆದೆನು. ಎದುರು ಪುನಃ ಅದೇ ಬಿಳೀ ಶರ್ಟು. ಆದರೂ ಕೂಡಾ ನನಗೆ ಡಾ. ಜಯೇಶ್ ಶಾಹರ ಮುಖ ಕಾಣಿಸುತ್ತಿರಲಿಲ್ಲ. ನಾನು ಕೇಳಿದೆ ದಾದಾರನ್ನು ಕೇಳಿದೆಯಾ? ಹೌದು ಅವರು ಹೇಳಿದ ಹಾಗೆಯೇ ಮಾಡುತ್ತಿದ್ದೇನೆ ಉತ್ತರ ಬಂದಿತು. ನಾನು ಎರಡೂ ಕೈಗಳನ್ನು ಮುಂದಕ್ಕೆ ಚಾಚಿದೆನು. ತಗೋಪ್ಪಾ ಎಲ್ಲಿಗೆ ಕೊಡಬೇಕೋ ಕೊಡು. ಅನಂತರ ನನಗೆ ಎಲ್ಲಾ ಸಮಯ ಡಾ. ಜಯೇಶ್‌ರ ಸ್ವರದಲ್ಲಿ ಅನಿರುದ್ಧ ಚಾಲೀಸಾ ಮತ್ತು ದತ್ತಮಾಲಾ ಮಂತ್ರ ಕೇಳಿಸುತ್ತಿತ್ತು ಹಾಗೂ ನನಗೆ ಸತತವಾಗಿ ನನ್ನ ಬೆಡ್‌ನ ಮೇಲಿನ ಚಪ್ಪರ ಎಂದರೆ ನನ್ನ ಬಾಪೂರವರ ಪ್ರಸನ್ನವಾದ ಮುಖ ಹಾಗೂ ಸುಚ್ಚಿತ್‌ದಾದಾ ಮತ್ತು ನಂದಾಮಾತೆಯು ಸತತವಾಗಿ ಬೆಡ್‌ನ ಸುತ್ತ ಸುತ್ತುತ್ತಿರುವಂತೆಯೇ ಅನಿಸುತ್ತಿತ್ತು. ತುಂಬಾ ಸಮಯದ ನಂತರ ನಾನು ಕಣ್ತೆರೆದೆನು. ಜಯೇಶ್ ನನ್ನ ಪಕ್ಕದಲ್ಲಿ ನನ್ನ ಕೈ ಹಿಡಿದುಕೊಂಡು ಕುಳಿತಿದ್ದರು. ಜೋರು ಜೋರಾಗಿ ದತ್ತ ಮಾಲಾ ಮಂತ್ರವನ್ನು ಸತತವಾಗಿ ಪಠಿಸುತ್ತಿದ್ದರು. ಅವರ ಕಣ್ಣುಗಳಿಂದ ಹರಿದು ಬರುತ್ತಿರುವ ಪ್ರೇಮ ನನಗೆ ಸ್ಪಷ್ಟವಾಗಿ ಕಾಣಿಸುತ್ತಿತ್ತು.''ಘಂಟೆ ಎಷ್ಟಾಯಿತು? ದಾದಾ ಮತ್ತು ನಂದಾಮಾತೆಯವರನ್ನು ಕುಳಿತುಕೊಳ್ಳಲು ಹೇಳಿರಿ'' ಜಯೇಶ್ ಹೇಳಿದರು. ಮುಂಜಾವಿನ 5.30 ಘಂಟೆಯಾಗಿದೆ. ಇಲ್ಲಿ ಯಾರೂ ಇಲ್ಲ. ನಿನ್ನೆ ರಾತ್ರಿಯಿಂದ ನಿನಗೆ ಎರಡು ಬಾರಿ ರಕ್ತ ಕೊಡಬೇಕಾಯಿತು. ಪ್ರತಿ ಎರಡು ಘಂಟೆಗೊಮ್ಮೆ ಪ.ಪೂ.ದಾದಾರವರ ಫೋನ್ ಬರುತ್ತಿದೆ. ಅವರೂ ರಾತ್ರಿಯಿಡೀ ಮಲಗಿಲ್ಲ. ಅರ್ಥಾತ್ ಬಾಪೂ ಮತ್ತು ನಂದಾಮಾತೆ ಕೂಡಾ ಮಲಗಿರಲಿಕ್ಕಿಲ್ಲ. ಸಾಯಂಕಾಲ ಸುಮಾರು 7.30 ಘಂಟೆಯ ಸಮಯಕ್ಕೆ ನಿನ್ನ ಹೃದಯ ಬಡಿತ ಮತ್ತು ಶ್ವಾಸ ಕ್ರೀಯೆಯು ನಿಂತೆ ಹೋಗುವ ಹಾಗಿತ್ತು. ಹೃದಯ ಬಡಿತವು ಮಿನಿಟಗೆ 60 ಆಗುವಲ್ಲಿ ಕೇವಲ 40-45 ಆಗುತ್ತಿತ್ತು. ಶ್ವಾಸವಂತೂ ಕೇವಲ 5-6 ಸಲವೇ ನಡೆಯುತ್ತಿತ್ತು. ದಾದಾರವರು

ಹೇಳಿದ ಉಪಾಸನೆಯನ್ನು ಮಾಡಿದುದರಿಂದಲೇ ನಿನ್ನ ಈ ತೆರೆದ ಕಣ್ಣುಗಳನ್ನು ನಾನಿವತ್ತು ನೋಡುತ್ತಿದ್ದೇನೆ.

ಮಾರನೆ ದಿನ ಬೆಳಗ್ಗಿನಿಂದಲೇ ನನಗೆ ಒಂದು ನವಜಾತ ಮಗುವಿನಂತೆ ಅತಿಶಯ ಉತ್ಸಾಹ ಅನಿಸತೊಡಗಿತ್ತು. ಇದೇ ಅವಧಿಯಲ್ಲಿ ಶೀಲಾ ಪೋತ್‌ನೀಸ್ ನಮ್ಮ ಆಸ್ಪತ್ರೆಯಲ್ಲಿ ಆಡ್ಮಿಟ್ ಆಗಿದ್ದರು. ಆಕೆಯನ್ನು ನೋಡಲು ನವೆಂಬರ್ 21ರಂದು ಸ್ವತಃ ಸುಚಿತ್ ದಾದಾ ಬಂದಿದ್ದರು. ಆಗ ನಾನವರ ಚರಣಗಳನ್ನು ಹಿಡಿದು ಗೋಳೋ ಎಂದು ಅತ್ತೆನು. ‘‘ಅರೇ ಹುಚ್ಚಿ ಇದೇನು? ನಾನೇನು ಹೇಳಿದ್ದೆ, ಇವಳಿಗೆ ಏನೂ ಆಗುವುದಿಲ್ಲ’’

ಅದರ ನಂತರ ನನ್ನ ಆರೋಗ್ಯ ಸಂಪೂರ್ಣ ಸರಿಯಾಯಿತು. ಮುಂದಿನ ಒಂದು ವಾರದಲ್ಲಿ ನನಗೆ ಹ್ಯಾಪೀ ಹೋಮ್‌ಗೆ ಹೋಗುವ ಸಂಧಿ ಸಿಕ್ಕಿತ್ತು. ನನಗೆ ತುಂಬಾ ಆನಂದವಾಗಿದ್ದಿತು. ನನ್ನೆದುರಿಗೆ ನನ್ನ ಪೂಜ್ಯ ಬಾಪೂ, ನಂದಾಮಾತೆ ನಿಂತಿದ್ದರು. ಅವರೊಂದಿಗೆ ಸಮೀರ್‌ದಾದಾ ಮತ್ತವರ ತಾಯಿ ಕೂಡಾ ಇದ್ದರು. ತಾಯಿ ಅರೇ ಇದೇನು ಇಷ್ಟು ಬಡಕಲಾಗಿದ್ದೀಯಾ? ಎಂದು ಕೇಳಲು ಮುಂದಾಗುತ್ತಿದ್ದಾಗ ನಂದಾಮಯಿ ಹೇಳಿದರು ‘‘ಎಷ್ಟೊಂದು ಕಠಿಣ ಪರೀಕ್ಷೆ ಕೊಡಬೇಕಾಗುತ್ತದೆಯಮ್ಮಾ’’. ನಂತರ ನನ್ನ ಹತ್ತಿರಕ್ಕೆ ನಡೆದು ಬಂದು ತಮ್ಮ ಬಲ ಕೈಯಲ್ಲಿದ್ದ ಸರಪಳಿಯನ್ನು ಎಡಕೈಗೆ ತೆಗೆದುಕೊಂಡು ಬಲಗೈಯನ್ನು ನನ್ನ ಮಸ್ತಕದ ಮೇಲಿಟ್ಟು ಜೋರಾಗಿ ಅದುಮಿದರು. ‘‘ಏನೂ ಆಗುವುದಿಲ್ಲ ನನ್ನ ಮಗುವಿಗೆ’’ ನನ್ನ ಕಣ್ಣುಗಳಿಂದ ಆಶ್ರುವಿನ ಧಾರೆ ಹರಿಯತೊಡಗಿತು.

ನಿಜವಾಗಿಯೂ ನನ್ನ ಮತ್ತು ಕಾಲರೂಪೀ ಯಮನ ನಡುವೆ ನನ್ನ ಅನಿರುದ್ಧರಾಮನೇ ನಿಂತಿದ್ದರು.

ANUBHAVS

# HARI OM

© Copyright 2010, Manasamarthyadata.com

manasamarthyadata.com